1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 401-2025

**ಸಿ.ಡಬ್ಲು -**2**, ಪಿ.ಡಬ್ಲು -**2

**ಸಾಕ್ಷಿದಾರರ ಹೆಸರು** : ಮಧು
ತಂದೆಯ **ಹೆಸರು** : ಮಹಾಬಲೇಶ್ವರ
**ವಯಸ್ಸು** : 24 ವರ್ಷ
**ಉದ್ಯೋಗ** : ಖಾಸಗಿ ನೌಕರಿ
**ವಾಸ** : ಕೌತಿ ಗ್ರಾಮ, ಸಾಗರ ತಾಲ್ಲೂಕು.

**ಪ್ರಮಾಣೀಕರಿಸಿದ** ದಿನಾಂಕ : 14.07.2026.

**ಮುಖ್ಯ ವಿಚಾರಣೆ : ಸಸಅ ರಿಂದ**

1. ಚಾಸ 1 ಮತ್ತು 3 ರವರ ಪರಿಚಯವಿದೆ. ಮೃತ ರಾಮಚಂದ್ರಪ್ಪ ರವರ ಪರಿಚಯವಿದೆ, ಅವರು ಅಪಘಾತದಲ್ಲಿ ಮೃತಪಟ್ಟರು. ಅಪಘಾತವನ್ನು ಯಾರು ಮಾಡಿದರು ಏನು ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ- ಸ.ಸ.ಅ. ರವರಿಂದಃ-

1. ಈಗ ಓದಿ ಹೇಳಿದಂತೆ ದಿಃ13.11.2024 ರಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿದ್ದರಿಂದ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.